

## ಅಪರಾಧಗಳ ನಗರ

ಚಿನ್ನವನ್ನೇ ಕೇಂದ್ರವಾಗಿಟ್ಟುಕೊಂಡು ನಿರ್ಮಾಣವಾಗಿದ್ದ ಕೆ.ಜಿ.ಎಫ್. ಜಿಲ್ಲಾ ಕೇಂದ್ರವಲ್ಲದಿದ್ದರೂ ಬ್ರಿಟಿಷರು ಇಲ್ಲಿ ಪೊಲೀಸ್ ಸೂಪರಿಂಟೆಂಡ್‌ರನ್ನು ನೇಮಿಸಿದ್ದರು. ಈಗಲೂ ಇಲ್ಲಿ ಎಸ್.ಪಿ. ಕಾರ್ಯ ನಿರ್ವಹಿಸುತ್ತಾರೆ.

ಗಣಿಗಳಿಂದ ಹೊರಹಾಕುವ ನೀರಿನಲ್ಲಿ ಚಿನ್ನದ ಅಂಶವುಳ್ಳ ಪುಡಿಯಿದ್ದು, ಅದನ್ನು ಪಂಪ್‌ಗಳಿಂದ ಸೋಸಿ ಸಂಗ್ರಹಿಸುವ ತಂಡಗಳು ಇಲ್ಲಿ ಹಿಂದೆ ಇದ್ದವು.

ಗಣಿ ನಿಂತ ಮೇಲೆ ಅಲ್ಲಿಯ ಯಂತ್ರೋಪಕರಣ, ಉಕ್ಕು ಸಾಮಗ್ರಿ ಕದಿಯುವ ಗುಂಪುಗಳು ಭೂಗತ ಚಟುವಟಿಕೆಗಳನ್ನು ಈಗಲೂ ನಡೆಸುವುದಿದೆ. ಬಿ.ಜಿ.ಎಂ.ಎಲ್.ಗೆ ಸೇರಿದ ಭೂಮಿಯನ್ನು, ಆಸ್ತಿಯನ್ನು ಕಬಳಿಸುವ ಗುಂಪುಗಳು ಈಚೆಗೆ ಹೆಚ್ಚಿವೆ.




ಆಗಿನ ಮೈಸೂರು ರಾಜ್ಯದ ಸುಪರ್ದಿಗೆ ಬಂದ ಗಣಿಗಳನ್ನು ನಿಭಾಯಿಸುವುದು ರಾಜ್ಯ ಸರ್ಕಾರಕ್ಕೆ ಕಷ್ಟಸಾಧ್ಯವಾದಾಗ ಕೇಂದ್ರ ಸರ್ಕಾರ ಗಣಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ನಂತರ ಬಿ.ಜಿ.ಎಂ.ಎಲ್. (ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್) ಸ್ಥಾಪಿಸಿತು. ಇದರ ಉಸ್ತುವಾರಿಗೆ ಕೆ.ಜಿ.ಎಫ್. ಗಣಿಗಳು ಬಂದವು.

ಬ್ರಿಟಿಷರಿದ್ದಾಗಲೇ ಕೆ.ಜಿ.ಎಫ್. ನಗರವಾಗಿ ಬೆಳೆದು ಐಷಾರಾಮಿ ವಾತಾವರಣ ಪಡೆದಿತ್ತು. ಲಿಟಲ್ ಇಂಗ್ಲೆಂಡ್ ಎಂಬ ವಿಶೇಷಣಕ್ಕೂ ಪಾತ್ರವಾಗಿತ್ತು. 2.4 ಲಕ್ಷ ಜನಸಂಖ್ಯೆ ಇದ್ದ ಕೆ.ಜಿ.ಎಫ್. ಬೆಂಗಳೂರಿಗೂ ಮೊದಲು ವಿದ್ಯುತ್ ಸಂಪರ್ಕ (1902) ಪಡೆದಿತ್ತು. 300 ಹಾಸಿಗೆಗಳ ಆಸ್ಪತ್ರೆ 1880 ರಲ್ಲಿಯೇ ಅಸ್ತಿತ್ವಕ್ಕೆ ಬಂದಿತ್ತು. ದೇಶದ ಮೊಟ್ಟಮೊದಲ ಎಕ್ಸ್ ರೇ ಯಂತ್ರ ಕಂಡ ಪಟ್ಟಣವೂ ಇದೇ.

ಬ್ರಿಟಿಷ್ ಕಂಪೆನಿ ಹೊರಟು ಹೋಯಿತು. ಬಿಳಿಯ ಅಧಿಕಾರಿಗಳು ಬ್ರಿಟನ್–ಬೆಂಗಳೂರಿನಲ್ಲಿ ನೆಲೆ ನಿಂತರು. ಆಂಗ್ಲೊ ಇಂಡಿಯನ್ನರು ತಮ್ಮದೇ ಆದ ಕಾಲೋನಿ ತೊರೆದು ಬೆಂಗಳೂರಿಗೆ ಹೋದರು. (ಕೆಲವರು ಈಗಲೂ ಇಲ್ಲಿಯೇ ಉಳಿದಿದ್ದಾರೆ) ಕೆಲವರು ಮಾತ್ರ ಆಸ್ಟ್ರೇಲಿಯಾ ಇಂಗ್ಲೆಂಡ್‌ಗೆ ತೆರಳಿದರು.

### ಉತ್ಪಾದನೆಯಲ್ಲಿ ಇಳಿಕೆ

1980 ರಲ್ಲಿ ಶತಮಾನೋತ್ಸವ ಆಚರಿಸಿಕೊಂಡ ಕೆ.ಜಿ.ಎಫ್. ಗಣಿಗಳು ಎಂದಿನಂತೆ ಕಾರ್ಯ ನಿರ್ವಹಿಸುತ್ತಿದ್ದರೂ ಚಿನ್ನದ ಉತ್ಪಾದನೆ ಗಮನಾರ್ಹವಾಗಿ ಇಳಿದಿತ್ತು. ಕಾರ್ಮಿಕರ ಸಂಖ್ಯೆ ಕೂಡ ಕಡಿಮೆಯಾಗಿತ್ತು. 1989 ರಲ್ಲಿ ಪ್ರತಿ ಟನ್ನಿಗೆ ಕೇವಲ 3.21 ಗ್ರಾಂ ಶುದ್ಧ ಚಿನ್ನ ಸಿಕ್ಕಿತ್ತು. ಟನ್‌ಗಳಲ್ಲಿ ಇದ್ದ ವ್ಯವಹಾರ ಕಿಲೋಗ್ರಾಂಗಳಿಗೆ, ಕಾಲಕ್ರಮೇಣ ಗ್ರಾಂಗಳಿಗೆ ಇಳಿಮುಖವಾಗಿತ್ತು.

ಉತ್ಪಾದನಾವೆಚ್ಚ ಏರುತ್ತಲೇ ಇತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಗ್ರಾಂಗೆ 400 ರೂ. ಇದ್ದಾಗ ಕೆ.ಜಿ.ಎಫ್.ಗಳಲ್ಲಿ ಅದನ್ನು ಉತ್ಪಾದಿಸಲು ಒಂದು ಸಾವಿರ ರೂ. ಖರ್ಚು ಮಾಡಬೇಕಿತ್ತು. ಉತ್ಪಾದನಾ ಸೋರಿಕೆಯ ಪ್ರಮಾಣವೂ ಹೆಚ್ಚುತ್ತಿತ್ತು. ಇವೆಲ್ಲ ಏರುಪೇರುಗಳ ನಡುವೆ ಕಾರ್ಮಿಕರ ಬದುಕಿನಲ್ಲಿ ಸ್ಥಿರತೆ ಕಾಣಲು ಸಾಧ್ಯವಾಗಲಿಲ್ಲ.

ಸಾಲದ ಹೊರೆಯನ್ನು ಬಿ.ಜಿ.ಎಂ.ಎಲ್. ಹೊತ್ತು ಹೊತ್ತು ಬಸವಳಿಯಿತು. ಕಾರ್ಮಿಕರ ಪರಿಸ್ಥಿತಿ ಇನ್ನೂ ಶೋಚನೀಯವಾಯಿತು.